


## ಹೆಚ್ಚುತ್ತಿರುವ ವಂಚನೆ

ಭಾರತದಲ್ಲಿ ಸೈಬರ್‌ಕ್ರೈಮ್ ಪಟ್ಟಿಯಲ್ಲಿ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್ ವಂಚನೆ ದೂರುಗಳೇ ಅಗ್ರಸ್ಥಾನ ಪಡೆದುಕೊಂಡಿವೆ. ಕಳೆದ ಮೂರು ವರ್ಷಗಳಲ್ಲಿ ಕಾರ್ಡ್ ವಂಚನೆಗಳ ಪ್ರಕರಣ ಮೂರು ಪಟ್ಟು ಹೆಚ್ಚಾಗಿವೆ. ಅಸೋಚಾಮ್ ಮತ್ತು ಇವೈ ಎಂಬ ಸಂಶೋಧನಾ ಸಂಸ್ಥೆಗಳು ನಡೆಸಿರುವ ಅಧ್ಯಯನ ಈ ವಿಷಯವನ್ನು ಬಯಲಿಗೆ ತಂದಿದೆ. 'ಸೈಬರ್‌ಕ್ರೈಮ್‌ಗಳನ್ನು ತಡೆಗಟ್ಟಲು ವ್ಯೂಹಾತ್ಮಕ ರಾಷ್ಟ್ರೀಯ ಕ್ರಮಗಳು' ಎಂಬ ಹೆಸರಿನಲ್ಲಿ ನಡೆದಿರುವ ಅಧ್ಯಯನವು , ಕಾರ್ಡ್ ವಂಚನೆಯ ವಿವಿಧ ಕ್ರಮಗಳ ಬಗ್ಗೆ ಬೆಳಕು ಚೆಲ್ಲಿದೆ.



ದಾಖಲಾಗಿರುವ ಒಟ್ಟು ಸೈಬರ್ ಕ್ರೈಮ್‌ಗಳಲ್ಲಿ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ಮೂಲಕ ನಡೆಸಿರುವ ಆನ್‌ಲೈನ್ ವಹಿವಾಟುಗಳ ವಂಚನೆಯ ಪ್ರಮಾಣ ಶೇಕಡಾ 46ರಷ್ಟಿದೆ. ಫೇಸ್‌ಬುಕ್ ಖಾತೆಯ ಮೂಲಕ ನಡೆಸಿದ ವಂಚನೆಗಳ ದೂರುಗಳ ಪ್ರಮಾಣ (ಶೇಕಡಾ 39) ಎರಡನೆ ಸ್ಥಾನದಲ್ಲಿದೆ. ಮೊಬೈಲ್ ಮೂಲಕ ಬೆದರಿಕೆ, ವಂಚನೆ ಮಾಡಿರುವ ದೂರುಗಳು ಶೇಕಡಾ 21. ಇಮೇಲ್ ಐಡಿ ಹ್ಯಾಕಿಂಗ್ ಪ್ರಕರಣಗಳು ಶೇಕಡಾ 18. ಕೊನೆಯದಾಗಿ ಮೊಬೈಲ್ ಮೂಲಕ ಬೈಗುಳ ಮತ್ತಿತರ ದೂರುಗಳ ಪ್ರಮಾಣ ಶೇಕಡಾ 12ರಷ್ಟು ಎಂದು ಅಧ್ಯಯನ ವರದಿ ತಿಳಿಸಿದೆ.

ಇ ವ್ಯಾಲೆಟ್ ಮತ್ತು ಇತರ ಆನ್‌ಲೈನ್ ಪಾವತಿಗಳ ಮೂಲಕ ಆನ್‌ಲೈನ್ ವಹಿವಾಟುಗಳು ಇನದೀಗ ತೀವ್ರ ಏರಿಕೆ ಕಾಣುತ್ತಿರುವುದರಿಂದ 2017ರಲ್ಲಿ ಮೊಬೈಲ್ ವಂಚನೆಗಳಲ್ಲಿ ಶೇಕಡಾ 65ರಷ್ಟು ಹೆಚ್ಚಳ ಆಗುವ ಸಾಧ್ಯತೆಗಳಿವೆ ಎಂದೂ ಈ ಅಧ್ಯಯನ ಎಚ್ಚರಿಸಿದೆ.

ಹಾಗೆಂದು ಪ್ಲಾಸ್ಟಿಕ್ ಕಾರ್ಡ್‌ಗಳು ಮತ್ತು ಆನ್‌ಲೈನ್ ವಹಿವಾಟುಗಳು ದೇಶದ ಎಲ್ಲ ವರ್ಗಗಳನ್ನು ತಲುಪುತ್ತಿವೆಯೆ? ಇವತ್ತಿಗೂ ಸಾಕ್ಷರತೆಯಿಂದ ವಂಚಿತವಾಗಿರುವ ಬಹುದೊಡ್ಡ ಜನವರ್ಗ ಇರುವ ದೇಶದಲ್ಲಿ ಇಂತಹ ತಂತ್ರಜ್ಞಾನ ಆಧಾರಿತ ವಹಿವಾಟುಗಳು ಯಶಸ್ಸು ಹೊಂದಬಹುದೆ? ಜನರ ಹಣಕಾಸು ವಹಿವಾಟು ಈ ಅಂತರ್ಜಾಲ ವಹಿವಾಟಿನಲ್ಲಿ ಪೂರ್ತಿ ಸುರಕ್ಷಿತವಾಗಿರಬಹುದೆ? ಸ್ವೀಡನ್‌ನಂತಹ ಕಡಿಮೆ ಜನಸಂಖ್ಯೆಯ, ಅತ್ಯಂತ ವೇಗದ ಅಂತರ್ಜಾಲ ವ್ಯವಸ್ಥೆಯುಳ್ಳ, ಕಡಿಮೆ ವೆಚ್ಚದಲ್ಲಿ ಅಂತರ್ಜಾಲ ವಹಿವಾಟು ಸಾಧ್ಯವಾಗುವ, ಅತ್ಯಂತ ಹೆಚ್ಚು ಸಾಕ್ಷರತೆಯಿರುವ ದೇಶದ ಜತೆಗೆ ಭಾರತವನ್ನು ಹೋಲಿಸಿ ನೋಡುವುದು ಎಷ್ಟು ಸರಿ? ನಮ್ಮಲ್ಲಿ ಶೇಕಡಾ 27ರಷ್ಟು ಜನ ಇನ್ನೂ ಅನಕ್ಷರಸ್ಥರಿದ್ದಾರೆ. ಸ್ಮಾರ್ಟ್‌ಫೋನ್‌ಗಳನ್ನು ಹೊಂದಿರುವವರ ಸಂಖ್ಯೆ 20 ಕೋಟಿ ಮೀರಿಲ್ಲ. ಇವರೆಲ್ಲರ ಮಧ್ಯೆ ಡಿಜಿಟಲ್ ಆರ್ಥಿಕತೆಗೆ ಜಿಗಿಯುವುದು ಹೇಗೆ ಸಾಧ್ಯ?




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

